ದಿನಾಂಕಃ 23.10.2025

ಅಸಲುದಾವೆ 97/2020

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ದಾವ ಐಟಂ ನಂ.1, 2, 3, 11 ರಿಂದ 13 ಕೃಷಿ ಭೂಮಿಗಳು ಎಂದರೆ ಸರಿ. ಸದರಿ ಕೃಷಿ ಜಮೀನುಗಳಲ್ಲಿ ಏನು ಬೇಳೆಯುತ್ತೀರಿ ಎಂದರೆ ಸಾಕ್ಷಿ ಕೆ.ಎಂ.ದೊಡ್ಡಿ ಜಮೀನುಗಳಲ್ಲಿ ಕಬ್ಬು ಬೆಳೆಯುತ್ತೇವೆ, ಬಿದರೆ ಹೊಸಹಳ್ಳಿ ಜಮೀನನ್ನು ಗುತ್ತಿಗೆಗೆ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಸದರಿ ಬಿದರೆ ಹೊಸಹಳ್ಳಿ ಜಮೀನುಗಳನ್ನು ವರ್ಷದ ಲೆಕ್ಕದಲ್ಲಿ ಗುತ್ತಿಗೆಗೆ ಕೊಟ್ಟಿದ್ದೇವೆ. ಸದರಿ ಜಮೀನುಗಳನ್ನು ಎಷ್ಟು ಮೊತ್ತಕ್ಕೆ ಗುತ್ತಿಗೆಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ವರ್ಷಿಕವಾಗಿ ಒಂದು ಜಮೀನನ್ನು 2 ಸಾವಿರಕ್ಕೆ ಉಳಿದ ಜಮೀನುಗಳನ್ನು ರೂ.5 ಸಾವಿರಗಳಿಗೆ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಕೆ.ಎಂ.ದೊಡ್ಡಿ ಜಮೀನಿನಲ್ಲಿ ವಾರ್ಷಿಕವಾಗಿ ಎಷ್ಟು ಟನ್ ಕಬ್ಬು ಬೆಳೆಯುತ್ತೀರಿ ಎಂದರೆ ಸಾಕ್ಷಿ ನಿಖರವಾಗಿ ಹೇಳಲು ಆಗುವುದಿಲ್ಲ, 15 ಟನ್, 20 ಟನ್ ಬೆಳೆಯುತ್ತೇವೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನುಗಳಲ್ಲಿ ಬೆಳೆದ ಕಬ್ಬನ್ನು ಭಾರತಿನಗರದಲ್ಲಿ ಇರುವ ಸಕ್ಕರೆ ಕಾರ್ಖಾನೆಗೆ ಮಾರಾಟ ಮಾಡುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸಂಬಂಧಿಕರು ಯಾರದರು ಕೇಳಿದಾಗ ಸ್ವಲ್ಪ ಬಿತ್ತನೆಗೂ ಕೊಡುತ್ತೇವೆ ಎಂದು ಹೇಳುತ್ತಾರೆ. ಸಕ್ಕರೆ ಕರ್ಖಾನೆಗೆ ಕಬ್ಬನ್ನು ನನ್ನ ತಂದೆಯ ಹೆಸರಿನಲ್ಲಿ ಕೊಡುತ್ತಿದ್ದೇವೆ. ನಿಮ್ಮ ತಂದೆಯ ರೈತರ ಕ್ರಮ ಸಂಖ್ಯೆ ಯನ್ನು ಹೇಳು ಆಗುವುದಾ ಎಂದರೆ ಸಾಕ್ಷಿ ಗೊತ್ತಿಲ್ಲ ಮರೆತು ಹೊಗಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ರೈತರ ಕ್ರಮ ಸಂಖ್ಯೆ ಡಿ.ವಿ.2170 ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಹೆಸರಿನಲ್ಲಿ 2022-23 ನೇ ಸಾಲಿನಲ್ಲಿ 33 ವರೆ ಟನ್ ಕಬ್ಬನ್ನು ಸಕ್ಕರೆ ಕರ್ಖಾನೆಗೆ ಸರಬರಾಜು ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆ ವರ್ಷದಲ್ಲಿ ಸಾಗಾಣಿಕೆ ವೆಚ್ಚ ಮತ್ತು ಕಟಾವಿನ ವೆಚ್ಚ ಕಳೆದು ನಿಮ್ಮ ತಂದೆಯ ಹೆಸರಿಗೆ ರೂ.70,198/- ಬಂದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಫ್ಯಾಕ್ಟರಿಯವರು ಸಾಗಾಣಿಕೆ ವೆಚ್ಚ ಮತ್ತು ಕಟಾವಿನ ವೆಚ್ಚ ನಿಗದಿ ಪಡಿಸಿರುತ್ತಾರೆ, ಆದರೆ ನಾವು ಕೈಯಿಂದ ಅದಕ್ಕೂ ಹೆಚ್ಚಿನ ಮೊತ್ತವನ್ನು ಭರಿಸಿ ಫ್ಯಾಕ್ಟರಿಗೆ ಕಬ್ಬನ್ನು ಸರಬರಾಜು ಮಾಡಿರುತ್ತೇವೆ ಎಂದು ಹೇಳುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. 2023-24 ನೇ ಸಾಲಿನಲ್ಲಿ 38 ವರೆ ಟನ್ ಕಬ್ಬನ್ನು ಸಕ್ಕರೆ ಕರ್ಖಾನೆಗೆ ಸರಬರಾಜು ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆ ವರ್ಷದಲ್ಲಿ ಸಾಗಾಣಿಕೆ ವೆಚ್ಚ ಮತ್ತು ಕಟಾವಿನ ವೆಚ್ಚ ಕಳೆದು ನಿಮ್ಮ ತಂದೆಯ ಹೆಸರಿಗೆ

ರೂ.80,936/- ಬಂದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ಆದಾಯವೆಲ್ಲವನ್ನು ನೀವು ಮತ್ತು ನಿಮ್ಮ ತಂದೆಯವರೆ ಅನುಭವಿಸುತ್ತಿದ್ದೀರಿ ಎಂದರೆ ಸಾಕ್ಷಿ ಬೆಳೆ ಬೆಳೆಯಲು, ಗೊಬ್ಬರ, ಕೂಲಿ, ವಿದ್ಯುತ್ ಇತ್ಯಾದಿ ಖರ್ಚುಗಳಾಗಿರುತ್ತವೆ ಎಂದು ಉತ್ತರಿಸುತ್ತಾರೆ. ಬೆಳೆ ಬೆಳೆಯಲು ಅಷ್ಟೇನು ಖರ್ಚಾಗುವುದಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮಗೂ ನಿಮ್ಮ ತಂದೆಯವರಿಗು ಆಗಿ ಬರುತ್ತಿರಲಿಲ್ಲ, ಆಗಾಗ ಜಗಳವಾಗುತ್ತಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಹಾಗಾಗಿ ನೀವು ಕಾಲೇಜಿನ ವಸಹಿ ಗೃಹದಲ್ಲಿ ಹಾಗು ಮಂಡ್ಯದಲ್ಲಿ ವಾಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಪಿರ್ತಾರ್ಜಿತವಾಗಿ ಬಂದ ಮನೆ ಸುಮಾರು 40 ವರ್ಷದ ಹಳೆಯ ಮನೆಯಾಗಿತ್ತು, ಮಳೆ ಬಂದಾಗ ಸೋರುತ್ತಿತ್ತು ಹಾಗಾಗಿ ಕಾಲೇಜಿನ ವಸತಿ ಗೃಹ ಖಾಲಿ ಇದ್ದ ಕಾರಣ ಅಲ್ಲಿಗೆ ಬಂದು ವಾಸವಾಗಿದ್ದೇವೆ ಎಂದು ಹೇಳುತ್ತಾರೆ. ನೀವು ನಿಮ್ಮ ತಂದೆ ತಾಯಿಯವರಿಂದ ಬೇರೆಯಾಗಿ ವಾಸವಾಗಿದುದ್ದರಿಂದ ಪುನಿತ್ ಅವರ ವೈದ್ಯಕೀಯ ಖರ್ಚು ವೆಚ್ಚದ ಬಗ್ಗೆ ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ ವಾಸಕ್ಕೂ ಅದಕ್ಕೂ ಏನು ಸಂಬಂಧ, ನಾನು ಇತ್ತೀಚೆಗೆ ಕಾಲೇಜಿನ ವಸತಿ ಗೃಹಕ್ಕೆ ಹೋಗಿದ್ದೇನೆ, ನನ್ನ ತಮ್ಮನಿಗೆ 2016 ರಿಂದ 2019 ರವರೆಗೆ ಹುಷಾರಿರಲಿಲ್ಲ, ಸಂಪೂರ್ಣ ಜವಾಬ್ದಾರಿ ನಾನೇ ತೆಗೆದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು 10-12 ವರ್ಷಗಳಿಂದ ಕಾಲೇಜಿನ ವಸತಿ ಗೃಹದಲ್ಲಿಯೇ ವಾಸವಾಗಿದ್ದೀರಿ, ಆದರೂ ಇತ್ತೀಚೆಗೆ ವಾಸಕ್ಕೆ ಹೋಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಡಿ4 ರಿಂದ 18 ದಾಖಲಾತಿಗಳ ಮೇಲೆ ಪಾವತಿದಾರರ ಕಾಲಂ ನಲ್ಲಿ ಪುನಿತ್ ಎಂದೇ ಇದೆ ಎಂದರೆ ಸಾಕ್ಷಿ ಪೇಶೆಂಟ್ ಐಡಿ ನಂ. ನಲ್ಲಿಯೇ ಪೇಮೆಂಟ್ ಆಗುವುದು ಎಂದು ಉತ್ತರಿಸುತ್ತಾರೆ. ಪುನಿತ್ ಅವರ ವೈದ್ಯಕೀಯ ಖರ್ಚುಗಳನ್ನು ಅವರ ಹೆಂಡತಿ ದಿವ್ಯರವರೇ ಪಾವತಿಸಿದ್ದಾರೆ ಎಂದರೆ ಸುಳ್ಳು. ಪುನಿತ್ ಅವರು ತೀರಿಕೊಂಡ ನಂತರ ಅವರ ಹೆಂಡತಿ ದಿವ್ಯ ಮತ್ತು ಮಗನನ್ನು ಮನೆಯಿಂದ ಆಚೆ ಹಾಕಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅವರನ್ನು ಮನೆಯಿಂದ ಆಚೆ ಹಾಕಿದ ಸಮಯದಲ್ಲಿ ಅವರು ಪಾವತಿ ಮಾಡಿದ ಬಿಲ್ ಗಳು ಮನೆಯಲ್ಲಿ ಇದ್ದವು, ಅವುಗಳನ್ನು ನೀವು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನಿತ್ ಅವರ ಚಿಕಿತ್ಸೆಗಾಗಿ ಅವರ ಹೆಂಡತಿ ದಿವ್ಯರವರು ಕೈ ಸಾಲ ಮಾಡಿ ಮತ್ತು ಅವರ ತಂದೆಯ ಮನೆಯಿಂದ ಹಣವನ್ನು ಪಡೆದು ತಂದು ಖರ್ಚು ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನಿತ್ ಅವರ ವೈದ್ಯಕೀಯ ಖರ್ಚು ವೆಚ್ಚಗಳಿಗೆ ನೀವಾಗಲಿ ನಿಮ್ಮ ತಂದೆಯಾಗಲಿ ಒಂದು ಪೈಸೆಯನ್ನು ಭರಿಸಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

2. ನಮ್ಮ ತಂದೆಯ ಜೊತೆ ಜನಿಸಿದ ಅಣ್ಣ ತಮ್ಮಂದಿರ ಹೆಸರು ಬೋರಯ್ಯ, ವೆಂಕಟೇಗೌಡ ಅಲಿಯಾಸ್ ಪುಟ್ಟೇಗೌಡ, ಬೋರೇಗೌಡ ಅಲಿಯಾಸ್ ಸಿದ್ದಪ್ಪ. ನನ್ನ ತಂದೆಯನ್ನು ಸೇರಿ ಒಟ್ಟು 4 ಜನ ಅಣ್ಣ ತಮ್ಮಂದಿರು ಎಂದರೆ ಸರಿ. ನನ್ನ ತಂದೆಯ ತಂದೆಯ ಹೆಸರು ಬೋರಯ್ಯ. ನಮ್ಮ ತಂದೆಯಾ ತಾಯಿಯ ಹೆಸರು ಸಿದ್ದಮ್ಮ. ದಾವ ಸ್ವತ್ತುಗಳು ನಿಮ್ಮ ತಂದೆ ಹಾಗು ಅವರು ಅಣ್ಣ ತಮ್ಮಂದಿರ ನಡುವೆ ದಿ.16.05.2003 ರಂದು ಆದ ನೊಂದಾಯಿತ ವಿಭಾಗ ಪತ್ರದ ಮೂಲಕ ನಿಮ್ಮ ತಂದೆಯ ಭಾಗಕ್ಕೆ ಬಂದಿವೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೊಂದಾಯಿತ ವಿಭಾಗ ಪತ್ರದಲ್ಲಿ ಸಿ ಶೆಡ್ಯೂಲ್ ಸ್ವತ್ತುಗಳು ಎಂದು ತೋರಿಸಿರುವ ಸ್ವತ್ತುಗಳು ನಿಮ್ಮ ತಂದೆಯ ಭಾಗಕ್ಕೆ ಬಂದಿವೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ಹೇಳಿರುವ ದಾವ ಸ್ವತ್ತುಗಳಲ್ಲಿ ನಿಮ್ಮ ಭಾಗಕ್ಕೆ 1/3 ಭಾಗದ ಹಕ್ಕು ಇದೆ ಎಂದರೆ ಸಾಕ್ಷಿ ಹಕ್ಕಿದೆ, ಆದರೆ ಎಷ್ಟು ಭಾಗ ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಮ್ಮ ತಂದೆಗೂ 1/3 ಭಾಗದ ಹಕ್ಕಿದೆ ಎಂದರೆ ಸಾಕ್ಷಿ ಹಕ್ಕಿದೆ, ಆದರೆ ಎಷ್ಟು ಭಾಗ ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ಈ ದಾವೆಯ ವಾದಿ ಲೋಹಿತ್ ಗೌಡರವರಿಗು 1/3 ಭಾಗದ ಹಕ್ಕಿದೆ ಎಂದರೆ ಸಾಕ್ಷಿ ಹಕ್ಕಿದೆ, ಆದರೆ ಎಷ್ಟು ಭಾಗ ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.